# ಕರ್ನಾಟಕ ವಿಧಾನ ಪರಿಷತ್ತು

<table>
<tr><td>ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ</td><td>2295</td></tr>
<tr><td>ಸದಸ್ಯರ ಹೆಸರು</td><td>ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು)</td></tr>
<tr><td>ಉತ್ತರಿಸಬೇಕಾದ ದಿನಾಂಕ</td><td>26.03.2026</td></tr>
<tr><td>ಉತ್ತರಿಸುವ ಸಚಿವರು</td><td>ಮಾನ್ಯ ಮುಖ್ಯಮಂತ್ರಿಯವರು</td></tr>
<tr><th>ಪ್ರಶ್ನೆ</th><th>ಉತ್ತರ</th></tr>
<tr><td>ರಾಜ್ಯದ ವಿವಿಧ ಇಲಾಖೆಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಗುತ್ತಿಗೆದಾರರಿಗೆ ಬಾಕಿ ಅನುದಾನವನ್ನು ಬಿಡುಗಡೆ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು;</td><td>ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕೈಗೊಂಡ ಕಾಮಗಾರಿಗಳಡಿ ರೂ. 39296 ಕೋಟಿ ಮೊತ್ತದ ಬಿಲ್ಲುಗಳು ಪಾವತಿಗೆ ಬಾಕಿ ಇರುವುದು ಸರ್ಕಾರದ ಗಮನಕ್ಕಿರುತ್ತದೆ. ಲಭ್ಯವಾಗುವ ಆರ್ಥಿಕ ಸಂಪನ್ಮೂಲಗಳನ್ನು ಆಧರಿಸಿ ಪೂರಕ ಅಂದಾಜು-3ರಲ್ಲಿ ಹಾಗು ಮರುಹೊಂದಾಣಿಕೆ ಮೂಲಕ ಅನುದಾನ ಒದಗಿಸಿ ತೀರುವಳಿಗೆ ಕ್ರಮವಹಿಸಲಾಗಿದೆ. ಮುಂದುವರೆದು ಮುಂದಿನ ಸಾಲಿಗೆ ಮುಂದುವರೆಯು ಬಾಕಿ ಬಿಲ್ಲುಗಳನ್ನು 2026-27 ನೇ ಸಾಲಿನಲ್ಲಿ ಬಂಡವಾಳ ಲೆಕ್ಕ ಶೀರ್ಷಿಕೆಗಳಡಿ ಒದಗಿಸಲಾದ ಅನುದಾನದಲ್ಲಿ ಕಾಲ ಕಾಲಕ್ಕೆ ಲಭ್ಯವಾಗುವ ಆರ್ಥಿಕ ಸಂಪನ್ಮೂಲಗಳನ್ನು ಆಧರಿಸಿ ತೀರುವಳಿಗೊಳಿಸಲು ಕ್ರಮವಹಿಸಲಾಗುತ್ತಿದೆ.</td></tr>
<tr><td>ಸರ್ಕಾರದ ವಿವಿಧ ಇಲಾಖೆಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ ಗುತ್ತಿಗೆದಾರರಿಗೆ ಇಲ್ಲಿಯವರೆಗೂ ಬಾಕಿ ಅನುದಾನವನ್ನೂ ಪಾವತಿ ಮಾಡದೇ ಇರಲು ಕಾರಣವೇನು; ಇದರಿಂದಾಗಿ ಆರ್ಥಿಕ ಸಮಸ್ಯೆಯನ್ನು ಅನುಭವಿಸುತ್ತಿರುವ ಗುತ್ತಿಗೆದಾರರು ಆತ್ಮಹತ್ಯೆಗಳ ದಾರಿ ಹಿಡಿಯುತ್ತಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು</td><td>2023-24 ಪೂರ್ವದ ಒಟ್ಟಾರೆ ರೂ.29159 ಕೋಟಿ ಮೊತ್ತದ ಬಾಕಿ ಬಿಲ್ಲುಗಳು ವಿವಿಧ ಇಲಾಖೆಗಳಡಿ ಮುಂದುವರೆದಿರುತ್ತವೆ.ಮುಂದುವರೆದು 2023-24ರ ಪೂರ್ವದಲ್ಲಿ ಅನುದಾನ ಲಭ್ಯತೆಯ ಪರಿಗಣಿಸದೆ ಕಾಮಗಾರಿಗಳನ್ನು ನೀಡಲಾದ ಹಿನ್ನಲೆಯಲ್ಲಿ ಅಧಿಕ ಮೊತ್ತದ ಬಿಲ್ಲುಗಳು ಸೃಜನೆಗೊಂಡಿರುತ್ತವೆ. ಪ್ರಸ್ತುತ 2023-24 ರ ಪೂರ್ವದ ಬಹುತೇಕ ಬಾಕಿ ಬಿಲ್ಲುಗಳನ್ನು ತೀರುವಳಿಗೊಳಿಸಲಾಗಿದೆ. ಉಳಿದ ಬಾಕಿ ಬಿಲ್ಲುಗಳನ್ನು ಕಾಲ ಕಾಲಕ್ಕೆ ಲಭ್ಯವಾಗುವ ಸಂಪನ್ಮೂಲಗಳನ್ನು ಆಧರಿಸಿ ತೀರುವಳಿಗೊಳಿಸಲು ಕ್ರಮವಹಿಸಲಾಗುತ್ತಿದೆ.</td></tr>
<tr><td>ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿರುವ ಗುತ್ತಿಗೆದಾರರಿಗೆ ವಿವಿಧ ಇಲಾಖೆಗಳಿಂದ ಪಾವತಿ ಮಾಡಲು ಬಾಕಿ ಇರುವ ಅನುದಾನವೆಷ್ಟು; (ಇಲಾಖಾವಾರು ಮಾಹಿತಿ ನೀಡುವುದು)</td><td>ವಿವಿಧ ಪ್ರಮುಖ ಇಲಾಖೆಗಳಡಿ ಪಾವತಿಸಲು ಬಾಕಿ ಇರುವ ಬಿಲ್ಲುಗಳ ಮೊತ್ತ ಈ ಕೆಳಕಂಡಂತಿದೆ.<br>(ರೂ.ಕೋಟಿಗಳಲ್ಲಿ)
<table>
<tr><th>ಕ್ರಂ. ಸಂ</th><th>ಇಲಾಖೆ</th><th>ಮೊತ್ತ</th></tr>
<tr><td>1</td><td>ಲೋಕೋಪಯೋಗಿ</td><td>10421</td></tr>
<tr><td>2</td><td>ಜಲ ಸಂಪನ್ಮೂಲ</td><td>18772</td></tr>
<tr><td>3</td><td>ಸಣ್ಣ ನೀರಾವರಿ</td><td>3660</td></tr>
</table>
</td></tr>
</table>

<table>
<tr><td rowspan="3"></td><td>4</td><td>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್</td><td>1653</td></tr>
<tr><td>5</td><td>ನಗರಾಭಿವೃದ್ಧಿ</td><td>4690</td></tr>
<tr><td>6</td><td>ಆರೋಗ್ಯ ಮತ್ತು ಕುಟುಂಬ ಕಲ್ಯಾಣ</td><td>100</td></tr>
<tr><td>ಆರ್ಥಿಕ ದಿವಾಳಿತನ ಎದುರಿಸುತ್ತಿರುವ ಗುತ್ತಿಗೆದಾರರಿಗೆ ಯಾವ ಕಾಲಮಿತಿಯಲ್ಲಿ ಬಾಕಿ ಉಳಿದಿರುವ ಅನುದಾನವನ್ನು ಪಾವತಿ ಮಾಡಲಾಗುವುದು?</td><td colspan="3">ಕಾಲಕಾಲಕ್ಕೆ, ಲಭ್ಯವಾಗುವ ಆರ್ಥಿಕ ಸಂಪನ್ಮೂಲಗಳು, ಸರ್ಕಾರದ ಮೇಲಿರುವ ಹಣಕಾಸು ಭಾದ್ಯತೆಗಳು ಪರಿಗಣಿಸಿ ಬಾಕಿ ಬಿಲ್ಲುಗಳನ್ನು ತೀರುವಳಿ ಮಾಡಲು ಕ್ರಮವಹಿಸಲಾಗಿದೆ.</td></tr>
</table>

**ಕಡತ ಸಂಖ್ಯೆ:ಎಫ್‌ಡಿ 96 ಎಫ್‌ಸಿ-2/2026**

(ಸಿದ್ದರಾಮಯ್ಯ)
ಮುಖ್ಯಮಂತ್ರಿ